(ಶ್ರೀ ವಿ. ಎಸ್. ಕೌಜಲಗಿ)

(6) ಮಾನ್ಯ ಶ್ರೀ ಡಿ. ಆರ್. ಕಲ್ಮಲ್ಕರ್, ಎಂ.ಎಲ್.ಸಿ. (ಆಫ್ಜಲ್‌ಪುರ) ಇವರು, ಬೆಂಗಳೂರು ನಗರದಲ್ಲಿ 50 ಗ್ರಂಥಾಲಯಗಳಲ್ಲಿ 22 ನಡೆಯುತ್ತಿಲ್ಲವೆಂದು ಹೇಳಿದ್ದಕ್ಕೆ ಉತ್ತರವಾಗಿ—

ಗ್ರಂಥಾಲಯ ಇಲಾಖೆಯು, ಗುಲ್ಬರ್ಗ ಜಿಲ್ಲೆಯಲ್ಲಿ ಸರ್ಕಾರದ ನೆರವಿನಿಂದ ನಡೆಯುತ್ತಿರುವ ಸಾರ್ವಜನಿಕ ಗ್ರಂಥಾಲಯಗಳು ತೃಪ್ತಿಕರವಾದ ರೀತಿಯಲ್ಲಿ ನಡೆಯುತ್ತಿಲ್ಲವೆಂದು ದೂರುಗಳು ಬಂದಮೇರೆಗೆ, ತನಿಖೆನಡೆಸಿ, ಅಂತಹ ಸುಮಾರು 41 ಗ್ರಂಥಾಲಯಗಳಿಗೆ ಧನ ಸಹಾಯವನ್ನು ನಿಲ್ಲಿಸಲಾಗಿದೆ. ಇದೇ ರೀತಿಯ ಕ್ರಮವನ್ನು ಬೆಂಗಳೂರು ನಗರದಲ್ಲಿಯೂ ಕೂಡಾ ಈಗಾಗಲೇ ಕೈಗೊಂಡು ಸುಮಾರು 10 ಗ್ರಂಥಾಲಯಗಳಿಗೆ ಸಹಾಯ ಧನವನ್ನು ನಿಲ್ಲಿಸಲಾಗಿದೆ. ಅಲ್ಲದೆ ಅತೃಪ್ತಿಕರವಾದ ರೀತಿಯಲ್ಲಿ ನಡೆದಿರುವಂತಹ ಬೆಂಗಳೂರು ನಗರದಲ್ಲಿನ ಗ್ರಂಥಾಲಯಗಳಿಗೆ ಸಹಾಯ ಧನವನ್ನು ನಿಲ್ಲಿಸುವ ಕ್ರಮವನ್ನು ಯೋಚಿಸಲಾಗಿದೆ. ಈ ಕೆಲಸದಲ್ಲಿ ಇಲಾಖೆಯ ಅಧಿಕಾರಿಗಳು ಸಂಬಂಧಪಟ್ಟ ಸಂಸ್ಥೆಗಳಿಗೆ ಅಪತಕರವಾಗಿ ಕಂಡುಬಂದರೂ, ಇಂತಹ ಅತೃಪ್ತಿಕರವಾದ ಗ್ರಂಥಾಲಯಗಳಿಗೆ ಸರ್ಕಾರದ ಸಹಾಯ ಧನವನ್ನು ನಿಲ್ಲಿಸಲು ಯೋಚಿಸಲಾಗಿದೆ. ಹಾಗೂ ಇಲಾಖೆಗೆ ಸಂಬಂಧಪಟ್ಟ ಗ್ರಂಥಾಲಯಗಳು ಜಾಳಿಗೋಪ್ಪಾದಿಯಲ್ಲಿ ಅಲ್ಲಲ್ಲಿ ಪ್ರಸರಿಸಿದಂತೆ ಸರ್ಕಾರ ಸಹಾಯಧನ ಪಡೆದು ನಡೆಯುತ್ತಿರುವ ಗ್ರಂಥಾಲಯಗಳನ್ನು ಒಂದರಿಂದೊಂದು ಕಡಿಮೆಮಾಡುತ್ತಾ ಹೋಗುವುದು ಇಲಾಖೆಯ ಉದ್ದೇಶವಾಗಿದೆ. ಒಟ್ಟಿಗೆ ಇಲಾಖೆಯಿಂದ ಯಾವತ್ತೂ ನಮ್ಮ ಮೈಸೂರು ರಾಜ್ಯದ ಶ್ರೀಸಾಮಾನ್ಯರಿಗೆ ಪುಕ್ಕಟ್ಟೆಯಾಗಿ ಗ್ರಂಥಾಲಯ ಸೇವೆ ದೊರತು ಅದರ ಲಾಭಪಡೆದುಕೊಳ್ಳಬೇಕೆಂಬುದಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಸದನದಲ್ಲಿ ನಾವು ಏನು ಆರೋಪಗಳನ್ನು ಮಾಡಿದ್ದೇವೆ ಅದಕ್ಕೆ ಉತ್ತರಗಳನ್ನು ಯುವಜನ ಮಂತ್ರಿಗಳು ಪ್ರಪ್ರಥಮವಾಗಿ ಅಮೃತವಾಣಿಯಿಂದ ಹೇಳಿರುವುದಕ್ಕೆ ನಾನು ಸಂತೋಷ ವ್ಯಕ್ತಪಡಿಸುತ್ತೇನೆ. ಎರಡು ಲಕ್ಷ ರೂಪಾಯಿ ಪುಸ್ತಕ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಕೆಲವೇ ಪ್ರಕಾಶಕರಿಂದ ಅವನ್ನು ಪಡೆಯುವಾಗುತ್ತಿದೆ. ಎಷ್ಟು ಪುಸ್ತಗಳನ್ನು ತೆಗೆದುಕೊಳ್ಳುತ್ತೀರಿ? ಎಷ್ಟೆಷ್ಟು ಪೇಜಿನ ಪುಸ್ತಕಗಳಿಗೆ ಎಷ್ಟು ದುಡ್ಡು ಬೀಳುತ್ತದೆ? ಅದರಲ್ಲಿ ನಿಜವಾಗಿ ಪ್ರಿಂಟ್ ಆಗುವುದು ಎಷ್ಟು? ಎಷ್ಟು ಪುಸ್ತಕಗಳನ್ನು ಪರ್ಚೇಸ್ ಮಾಡಿದ್ದೀರಿ? ಎಷ್ಟು ಪಬ್ಲಿಷರ್ಸ್‌ರಿಂದ ತೆಗೆದುಕೊಂಡಿದ್ದೀರಿ! ಇದರ ಬಗ್ಗೆ ತಮ್ಮ ಅಧಿಕಾರಿಗಳಿಂದ ವಿವರಣೆ ಪಡೆಯಬೇಕು. ಇದುವರೆಗೆ ಏನು ವ್ಯವಹಾರ ನಡೆದಿದೆ ಅವನ್ನು ಸ್ವಲ್ಪ ಪರಿಶೀಲನೆ ಮಾಡಬೇಕು. ಇನ್ನು ಉಳಿದಿರುವ ಕಾಲ ಜಾಗಗಳಿಗೆ ರಿಸರ್ವೇಷನ್ ಪ್ರಿನ್ಸಿಪಲ್ ಪ್ರಕಾರ ಷೆಡ್ಯೂರ್ಡ್ ಕ್ಯಾಸ್ಟ್ ಷೆಡ್ಯೂರ್ಡ್ ಟ್ರೈಬ್ಸ್ ಅವರನ್ನು ತೆಗೆದುಕೊಳ್ಳಬೇಕು.

ಶ್ರೀ ಎಚ್. ಎಸ್. ಸಿದ್ದಪ್ಪ.—ಪ್ರಕಾಶಕರಿಂದ ಪುಸ್ತಕಗಳನ್ನು ತರಿಸಿ ಇಟ್ಟಮೇಲೆ ಬೆಂಕಿ ಬಿದ್ದು ಹೋಯಿತೇ?

ಶ್ರೀ ವಿ. ಎಸ್. ಕೌಜಲಗಿ.—ಪೋಲೀಸ್ ರಿಪೋರ್ಟ್ ಪ್ರಕಾರ ಅದು ಅಕಸ್ಮಾತ್ ಬೆಂಕಿಬಿದ್ದ ಘಟನೆ. ಪೋಲಿಸಿನವರು ಪ್ಯಾಪರ್ ಇನ್‌ವೆಸ್ಟಿಗೇಷನ್ ಮಾಡಿದ್ದಾರೆ.

Statement of the Minister of Agriculture and Forests

re : Supply of Fertilisers to Hassan District.

ಶ್ರೀ ಕೆ. ಎಚ್. ಪಾಟೀಲ್.—ಪೊನ್ನೆ ದಿವಸ ಮಾನ್ಯ ಸದಸ್ಯರು ಗೊಬ್ಬರದ ವಿಷಯವಾಗಿ ಮಾತನಾಡುತ್ತಾ ಹಾಸನದಲ್ಲಿ ಬಹಳ ಗೊಬ್ಬರದ ಕೊರತೆಯಾಗಿದೆ ಎಂದು ಹೇಳಿದರು. ಆ ವಿಷಯವಾಗಿ ರಿಪೋರ್ಟ್ ಬಂದಿದೆ. 300 ಟನ್ ಕ್ಯಾಲ್ಸಿಯಂ ನೈಟ್ರೇಟ್, 100 ಟನ್ ಅಮೋನಿಯಮ್ ಸಲ್ಫೇಟ ಮೈಸೂರು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ನವರು ಮೈಸೂರು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಮುಖಾಂತರ ತ್ವರಿತವಾಗಿ ಪೂರೈಸತೆ ಮಾಡುತ್ತಿದ್ದಾರೆ. ಇನ್ನೊಂದು ಮಾತು ಗೊಬ್ಬರದ ಕೊರತೆ ಆಗಿರುವುದನ್ನು ಕೇಂದ್ರ ಸರ್ಕಾರದ ಮೇಲೆ ಮತ್ತೆ ಮತ್ತೆ ಒತ್ತಾಯ

ತಂದಿರುವುದರಿಂದ, ಮಾನ್ಯ ಶಿಂಥೆಯವರಿಂದ ಒಂದು ಪತ್ರ ಬಂದಿದೆ. ಅದರ ಪ್ರಕಾರ 5 ಸಾವಿರ ಟನ್ ಹೆಚ್ಚಿಗೆ ನೈಟ್ರೋಜನ್ ಮೆನ್ಯೂರ್ ಕೊಡುತ್ತೇವೆಂದು ಒಪ್ಪಿದ್ದಾರೆ. ಈ ಸಂತೋಷದ ಸಂಗತಿಯನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಹಾಸನ ಜಿಲ್ಲೆಯಲ್ಲಿ 25 ಸಾವಿರ ಎಕರೆಯಲ್ಲಿ ಅಲೂಗಡ್ಡೆ ಹಾಕಿದ್ದೇವೆ. ಅದಕ್ಕೆ ಕ್ಯಾಲ್ಸಿಯಮ್ ನೈಟ್ರೇಟ್ ಗೊಬ್ಬರಬೇಕು. ಅಲ್ಲ ಒಂದು ಮೂಟೆ ಉಪ್ಪು ತೆಗೆದುಕೊಂಡರೆ, 4 ಮೂಟೆ ಬೇರೆ ಗೊಬ್ಬರ ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡುತ್ತಿದ್ದಾರೆ. ಹಾಗೆ ಗೊಬ್ಬರ ಕೊಡುವಾಗ ಬೇರೆ ಮೆನ್ಯೂರ್ ಕೊಡುವುದು ಅವಶ್ಯಕವಿಲ್ಲ. ಆದುದರಿಂದ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ನೈಟ್ರೋಜಿನ್ ಮೆನ್ಯೂರ್ ಮಾತ್ರ ಕೊಡಿಸಿಕೊಡಬೇಕು.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರ ಸೂಚನೆ ಗಮನದಲ್ಲಿ ಇಡುತ್ತೇನೆ. ಒಂದು ವಿಚಾರ ರೈತರ ಗಮನಕ್ಕೆ ತರುತ್ತೇನೆ. ಕೇವಲ ನೈಟ್ರೋಜನ್ ಮೆನ್ಯೂರ್ ಹಾಕುವುದರಿಂದ ಭೂಮಿಯಲ್ಲಿ ಫರ್ಟಿಲಿಟಿ ಇರುವುದಿಲ್ಲ. ಎನ್.ಪಿ.ಕೆ. ವ್ಯಾಲ್ಯೂ ನೋಡಿಕೊಂಡು ಹಾಕಬೇಕಾಗುತ್ತದೆ. ಒಕ್ಕಲುತನ ಖಾತೆಯವರು ಗೊಬ್ಬರ ಶಿಫಾರಸ್ಸು ಮಾಡುತ್ತಾರೆ. ಅದರಂತೆ ಗೊಬ್ಬರ ಹಾಕಿದರೆ ರೈತರಿಗೆ ಒಳ್ಳೆಯದು.

MADAM SPEAKER.—The House will now rise and meet tomorrow at 1-00 P.M.

The House adjourned at Thirty Minutes past Six of the Clock to meet again at One of the Clock on Thursday, the 6th July 1972.